# ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್ಐಐಡಿಸಿ)

KSIIDC

"ಖನಿಜ ಭವನ", 4ನೇ ಮಹಡಿ, ಪೂರ್ವ ಭಾಗ, ನಂ. 49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–1 ದೂರವಾಣಿ: 080–22258131–33,
ಇ–ಮೇಲ್: murthy.ksiidc@gmail.com // info@ksiidc.com ವೆಬ್‌ಸೈಟ್: www.ksiidc.karnataka.gov.in

## ವಿಜಯಪುರ ವಿಮಾನ ನಿಲ್ದಾಣಕ್ಕೆ ತಾಂತ್ರಿಕ ಸಿಬ್ಬಂದಿ (ಒಪ್ಪಂದದ ಆಧಾರದ ಮೇಲೆ) ನೇಮಕಾತಿ ಅಧಿಸೂಚನೆ

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್ಐಐಡಿಸಿ), ಕರ್ನಾಟಕ ಸರ್ಕಾರವು ವಿಜಯಪುರ ವಿಮಾನ ನಿಲ್ದಾಣವನ್ನು ನಿರ್ವಹಿಸುತ್ತಿದೆ. ಈ ಕೆಳಕಂಡ ಸಿಬ್ಬಂದಿಗಳನ್ನು ಕ್ರೋಢೀಕೃತ ವೇತನದ ಮೇಲೆ 1 ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಿಸಲು ಪ್ರಸ್ತಾಪಿಸಲಾಗಿದೆ. ಅಭ್ಯರ್ಥಿಗಳ ಕಾರ್ಯಕ್ಷಮತೆಯ ಆಧಾರದ ಮೇಲೆ ಗುತ್ತಿಗೆ ಅವಧಿಯನ್ನು ಅವಶ್ಯಕತೆಗೆ ಅನುಗುಣವಾಗಿ ಇನ್ನೊಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ವಿಸ್ತರಿಸಲಾಗುತ್ತದೆ.

| ಕ್ರ. ಸಂ. | ಹುದ್ದೆಯ ಹೆಸರು | ವಿದ್ಯಾರ್ಹತೆ ಮತ್ತು ಅನುಭವದ ವಿವರಗಳು | ಕ್ರೋಢೀಕೃತ ಸಂಭಾವನೆ (ತಿಂಗಳಿಗೆ ರೂ.) | ವಯೋಮಿತಿ |
|---|---|---|---|---|
| 01 | ಮುಖ್ಯ ಭದ್ರತಾ ಮುಖ್ಯಸ್ಥ (ಒಂದು ಹುದ್ದೆ) | • ಅಭ್ಯರ್ಥಿಯು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದಿರಬೇಕು.<br>• ಅಂತರರಾಷ್ಟ್ರೀಯ ಪ್ರಾದೇಶಿಕತೆ ಮತ್ತು ರಾಷ್ಟ್ರೀಯ ವಾಯುಯಾನ ಭದ್ರತಾ ನಿಯಮಗಳ ಕುರಿತಾದ ಜ್ಞಾನ.<br>• ವಿಮಾನ ನಿಲ್ದಾಣದಲ್ಲಿ ವಾಯುಯಾನ ಭದ್ರತಾ ಕಾರ್ಯಾಚರಣೆಗಳಲ್ಲಿ ಸಾಕಷ್ಟು ಅನುಭವ.<br>• ಪೊಲೀಸ್ ಭದ್ರತೆ, ಗುಪ್ತಚರ, ತನಿಖಾ ಸಂಸ್ಥೆಗಳು ಮತ್ತು ಸೈಬರ್ ಭದ್ರತೆಯಂತಹ ಇತರ ಭದ್ರತೆಗೆ ಸಂಬಂಧಿತ ಪಡೆಗಳಲ್ಲಿ ಅನುಭವ.<br>• ಭದ್ರತಾ ವ್ಯವಸ್ಥೆ ಮತ್ತು ಪ್ರವೇಶ ನಿಯಂತ್ರಣ, ವಿಮಾನದ ಒಳಗೆ ಮತ್ತು ಹೊರಗಿನ ಭದ್ರತೆಯ ಜ್ಞಾನ.<br>• ಕಂಪ್ಯೂಟರ್ ಜ್ಞಾನ.<br>• ಮಾನ್ಯತೆ ಹೊಂದಿರುವ AvSec ಪ್ರಮಾಣಪತ್ರ ಮತ್ತು AvSec ರಿಫ್ರೆಶರ್ ಪ್ರಮಾಣಪತ್ರದೊಂದಿಗೆ BCAS ನಿಂದ ವಾಯುಯಾನ ಭದ್ರತಾ ತರಬೇತಿಯಲ್ಲಿ ಮೂಲ ಜ್ಞಾನ ಹೊಂದಿದ್ದು ಅರ್ಹತೆ ಪಡೆದಿರಬೇಕು<br>• ವಿಮಾನ ನಿಲ್ದಾಣದಲ್ಲಿ ಭದ್ರತಾ ಅಧಿಕಾರಿಯಾಗಿ 10 ವರ್ಷಗಳ ಅನುಭವ. | ರೂ. 75,000/– | ಕನಿಷ್ಠ: 25 ವರ್ಷ ಗರಿಷ್ಠ: 55 ವರ್ಷ |
| 2 | ಸಹಾಯಕ ಟರ್ಮಿನಲ್ ವ್ಯವಸ್ಥಾಪಕರು | • ಅಭ್ಯರ್ಥಿಯು ಯಾವುದೇ ವಿಭಾಗದಲ್ಲಿ ಪದವಿ/ಅಥವಾ ಡಿಪ್ಲೊಮಾ ಪಡೆದಿರಬೇಕು.<br>• ಸ್ನಾತಕೋತ್ತರ/ಎಂಬಿಎ ಪದವಿ ಪಡೆದವರಿಗೆ ಆದ್ಯತೆ.<br>• ಅಭ್ಯರ್ಥಿಯು ವಿಮಾನ ನಿಲ್ದಾಣ ಕಾರ್ಯಾಚರಣೆಯ ಬಗ್ಗೆ ಪರಿಚಿತರಾಗಿರಬೇಕು. ವಿಮಾನ ನಿಲ್ದಾಣ ಕಾರ್ಯಾಚರಣೆಗಳಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. | 50,000/– | ಕನಿಷ್ಠ: 25 ವರ್ಷ ಗರಿಷ್ಠ: 45 ವರ್ಷ |
| 3 | ಸಹಾಯಕ ಏರ್ ಸೈಡ್ ಕಾರ್ಯಾಚರಣೆ ವ್ಯವಸ್ಥಾಪಕರು– ಕಾರ್ಯಾಚರಣೆ ಇಲಾಖೆ (ಒಂದು ಹುದ್ದೆ) | • ಅಭ್ಯರ್ಥಿಯು ಯಾವುದೇ ವಿಭಾಗದಲ್ಲಿ ಪದವಿ/ಅಥವಾ ಡಿಪ್ಲೊಮಾ ಪಡೆದಿರಬೇಕು.<br>• ಸ್ನಾತಕೋತ್ತರ/ಎಂಬಿಎ ಪದವಿ ಪಡೆದವರಿಗೆ ಆದ್ಯತೆ.<br>• ಅಭ್ಯರ್ಥಿಯು ವಿಮಾನ ನಿಲ್ದಾಣ ಕಾರ್ಯಾಚರಣೆಯ ಬಗ್ಗೆ ಪರಿಚಿತರಾಗಿರಬೇಕು. ವಿಮಾನ ನಿಲ್ದಾಣ ಕಾರ್ಯಾಚರಣೆಗಳಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. | 50,000/– | ಕನಿಷ್ಠ: 25 ವರ್ಷ ಗರಿಷ್ಠ: 45 ವರ್ಷ |
| 4 | ಸಹಾಯಕ ವ್ಯವಸ್ಥಾಪಕರು– ಭದ್ರತಾ ಇಲಾಖೆ (ಒಂದು ಹುದ್ದೆ) | • ಯಾವುದೇ ವಿಭಾಗದಲ್ಲಿ ಪದವಿ ಪಡೆದಿರಬೇಕು.<br>• ರಾಷ್ಟ್ರೀಯ ನಾಗರಿಕ ವಿಮಾನಯಾನ ಭದ್ರತಾ ತರಬೇತಿ ಕಾರ್ಯಕ್ರಮ (NCASTP) ದ ಅನುಸಾರ BCAS ನಿಂದ ಪ್ರಮಾಣೀಕರಣದೊಂದಿಗೆ ವಾಯುಯಾನ ಭದ್ರತೆಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ವೃತ್ತಿಪರರು.<br>• ವಾಯುಯಾನ ಭದ್ರತಾ ಕ್ಷೇತ್ರದಲ್ಲಿ ಕನಿಷ್ಠ 3 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ಅನುಭವ.<br>• AvSec ಪ್ರಮಾಣಪತ್ರ ಮತ್ತು AvSec ರಿಫ್ರೆಶರ್ ಪ್ರಮಾಣಪತ್ರದೊಂದಿಗೆ BCAS ನಿಂದ ವಾಯುಯಾನ ಭದ್ರತಾ ಹುದ್ದೆಯಲ್ಲಿ ಮೂಲ ಜ್ಞಾನ ಹೊಂದಿದ್ದು ಅರ್ಹತೆ ಪಡೆದಿರಬೇಕು.<br>• ಕಂಪ್ಯೂಟರ್ ಕಾರ್ಯಾಚರಣೆ ಮತ್ತು ಎಂಎಸ್ ಆಫೀಸ್ ಪ್ಯಾಕೇಜ್‌ನಲ್ಲಿ ಉತ್ತಮ ಜ್ಞಾನ ಹೊಂದಿರಬೇಕು. | 50,000/– | ಕನಿಷ್ಠ: 25 ವರ್ಷ ಗರಿಷ್ಠ: 50 ವರ್ಷ |
| 5 | ವಿಮಾನ ನಿಲ್ದಾಣ ವ್ಯವಸ್ಥೆ ಮತ್ತು ಐಟಿ ನೆಟ್ವರ್ಕ್ ಸಲಹೆಗಾರ (ಒಂದು ಹುದ್ದೆ) | • ಅಭ್ಯರ್ಥಿಯು AICTE ಅಥವಾ UGC ಮಾನ್ಯತೆ ಪಡೆದ/ಅನುಮೋದಿತ ವಿಶ್ವವಿದ್ಯಾಲಯ/ಸಂಸ್ಥೆಯಿಂದ ಎಲೆಕ್ಟ್ರಾನಿಕ್ಸ್ ಮತ್ತು ಸಂವಹನ ಇಂಜಿನಿಯರಿಂಗ್ ಅಥವಾ ಕಂಪ್ಯೂಟರ್ ಇಂಜಿನಿಯರಿಂಗ್‌ನಲ್ಲಿ ಪದವಿ ಪಡೆದಿರಬೇಕು.<br>• LAN ಆಪ್ಟಿಕಲ್ ಫೈಬರ್ ನೆಟ್‌ವರ್ಕ್, ಐಪಿ ಫೋನ್‌ಗಳು, ಐಪಿ ಫೋನ್ IPBX ಗಳಿಗೆ ಸಂಬಂಧಿಸಿದ ಸರ್ವರ್‌ಗಳು, ಇಂಟರ್‌ನೆಟ್ ಸಂಪರ್ಕಗಳು. CCTV ಸ್ವಿಚ್‌ಗಳು, CCTV ಕ್ಯಾಮರಾಗಳು. ಬೃಹತ್ ಡೇಟಾ ಸಂಗ್ರಹ ವ್ಯವಸ್ಥೆಗಳು. ಫೈರ್ ಅಲಾರ್ಮ್ ಸಿಸ್ಟಮ್, ಫೈರ್/ಸ್ಮೋಕ್ ಡಿಟೆಕ್ಟರ್‌ಗಳು, ಪ್ರವೇಶ ನಿಯಂತ್ರಣ ವ್ಯವಸ್ಥೆಗಳು, ಡೆಸ್ಕ್ ಟಾಪ್ ಸಿಸ್ಟಮ್‌ಗಳು ಮತ್ತು ಸಂಬಂಧಿತ ಹಾರ್ಡ್‌ವೇರ್, ಹಾರ್ಡ್‌ವೇರ್ ಸಂಬಂಧಿತ ಆಟೋಮ್ಯಾಟಿಕ್ ಹವಾಮಾನ ಕೇಂದ್ರಗಳು/ವಿಮಾನ ನಿಲ್ದಾಣ ವ್ಯವಸ್ಥೆಗಳು, ನೆಟ್‌ವರ್ಕ್ ಭದ್ರತಾ ವ್ಯವಸ್ಥೆಗಳಿಗೆ ಸಂಬಂಧಿಸಿದ PLC ಗಳ ನಿರ್ವಹಣೆ/ತೊಂದರೆ ನಿವಾರಣೆಯಲ್ಲಿ 5 ವರ್ಷಗಳ ಅನುಭವ ಹೊಂದಿರಬೇಕು. ಅಭ್ಯರ್ಥಿಯು BSNL ಮತ್ತು ಇತರ ಏಜೆನ್ಸಿಗಳೊಂದಿಗೆ ಸಂಪರ್ಕ ಸಾಧಿಸುವ ನಿರೀಕ್ಷೆಯಿದೆ.<br>• ಅಭ್ಯರ್ಥಿಯು ವೆಬ್‌ಸೈಟ್ ಮತ್ತು ಸಾಮಾಜಿಕ ಮಾಧ್ಯಮ ವಿಷಯಗಳನ್ನು ಸಹ ನಿರ್ವಹಿಸಲು ಸಾಧ್ಯವಾಗುವುದು ಅಪೇಕ್ಷಣೀಯವಾಗಿದೆ. | 65,000/– | ಕನಿಷ್ಠ: 25 ವರ್ಷ ಗರಿಷ್ಠ: 45 ವರ್ಷ |
| 6 | ಸಿವಿಲ್ ಇಂಜಿನಿಯರ್ (ಒಂದು ಹುದ್ದೆ) | • ಅಭ್ಯರ್ಥಿಗಳು ಬಿ.ಇ (ಸಿವಿಲ್) ಪಡೆದಿರಬೇಕು.<br>• ರನ್‌ವೇ ರಸ್ತೆಗಳು ಮತ್ತು ವಿಮಾನ ನಿಲ್ದಾಣ ನಿರ್ವಹಣೆಯಲ್ಲಿ ಪ್ರಮುಖ ಸಿವಿಲ್ ನಿರ್ಮಾಣ ಕಾರ್ಯಗಳಲ್ಲಿ 5 ವರ್ಷಗಳ ಅನುಭವ. | 50,000/– | ಕನಿಷ್ಠ:25 ವರ್ಷ ಗರಿಷ್ಠ:40 ವರ್ಷ |
| 7 | ಎಲೆಕ್ಟ್ರಿಕಲ್ ಇಂಜಿನಿಯರ್ (ಒಂದು ಹುದ್ದೆ) | • ಅಭ್ಯರ್ಥಿಯು ಬಿ.ಇ (ಎಲೆಕ್ಟ್ರಿಕಲ್) / ಡಿಪ್ಲೊಮಾ (ಎಲೆಕ್ಟ್ರಿಕಲ್) ಪಡೆದಿರಬೇಕು.<br>• ಸಬ್‌ಸ್ಟೇಷನ್ ನಿರ್ವಹಣೆ ಮತ್ತು ಕಟ್ಟಡ, ವಿದ್ಯುತ್, ELV ವ್ಯವಸ್ಥೆ/ HVAC ಸ್ಥಾಪನೆಯ ಸಂಬಂಧಿತ ಕ್ಷೇತ್ರದಲ್ಲಿ 5 ವರ್ಷಗಳ ಅನುಭವ. | 50,000/– | ಕನಿಷ್ಠ:25 ವರ್ಷ ಗರಿಷ್ಠ:40 ವರ್ಷ |

- ಆಸಕ್ತ ಅಭ್ಯರ್ಥಿಗಳು ಈ ಅಧಿಸೂಚನೆ ಪ್ರಕಟವಾದ 10 ದಿನಗಳ ಒಳಗೆ, ಶೈಕ್ಷಣಿಕ ಅರ್ಹತೆ ಮತ್ತು ಅನುಭವ ಪ್ರಮಾಣಪತ್ರಗಳೊಂದಿಗೆ ತಮ್ಮ ರೆಸ್ಯೂಮ್ ಅನ್ನು ಸ್ಪೀಡ್ ಪೋಸ್ಟ್ ಮೂಲಕ/ ಖುದ್ದಾಗಿ ಮೇಲೆ ತಿಳಿಸಿದ ವಿಳಾಸಕ್ಕೆ ಸಲ್ಲಿಸುವುದು.
- ಸಂದರ್ಶನದ ದಿನಾಂಕ ಮತ್ತು ಸಮಯವನ್ನು ತಿಳಿಸಲಾಗುವುದು.
- ಆಯ್ಕೆಯಾದವರನ್ನು ಮೇಲಿನಂತೆ ವಿಜಯಪುರ ವಿಮಾನ ನಿಲ್ದಾಣಕ್ಕೆ ಪೋಸ್ಟ್ ಮಾಡಲಾಗುತ್ತದೆ.
- ಯಾವುದೇ ಸ್ಪಷ್ಟೀಕರಣಗಳಿಗೆ, ನೀವು ಉಪ ಪ್ರಧಾನ ವ್ಯವಸ್ಥಾಪಕರು (ಪಿ & ಎ) – ಮೊ: 98458–33566 ಅವರನ್ನು ಸಂಪರ್ಕಿಸಬಹುದು.
- ನಿಗಮವು ಎಲ್ಲಾ ಅರ್ಜಿಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ ಮತ್ತು ಎಲ್ಲಾ ವಿಷಯಗಳಲ್ಲಿ ನಿಗಮದ ನಿರ್ಧಾರವೇ ಅಂತಿಮವಾಗಿರುತ್ತದೆ.
- ಕನ್ನಡ ಓದಲು, ಬರೆಯಲು ಮತ್ತು ಮಾತನಾಡುವ ಜ್ಞಾನ ಅತ್ಯಗತ್ಯ

**ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು (ಪಿ & ಎ)**